ಇ) ಕಳೆದ ಮೂರು ವರ್ಷಗಳಲ್ಲಿ ಪ್ರಾಧಿಕಾರವು ೨೬೫೯ ಎಕರೆ ೩೩ ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುತ್ತದೆ.

ಈ) ಸ್ವಾಧೀನಪಡಿಸಿಕೊಂಡ ಜಮೀನು ಮತ್ತು ನಿವೇಶನಕ್ಕಾಗಿ ಕಾದಿರುವವರ ಸಂಖ್ಯೆಯ ಅನುಪಾತವು ೧:೩ ಇರುತ್ತದೆ. ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ನಿವೇಶನದ ಬೇಡಿಕೆಯನ್ನು ಪೂರೈಸಲಾಗುವುದೆಂದು ಹೇಳಲು ಸಾಧ್ಯವಿರುವುದಿಲ್ಲ. ಕಾರಣ, ನಿವೇಶನದ ಬೇಡಿಕೆಯು ಯಾವಾಗಲೂ ಇದ್ದೇ ಇರುತ್ತದೆ.

ದಾವಣಗೆರೆ ನಗರದಲ್ಲಿ ಕರ್ನಾಟಕ ಗೃಹಮಂಡಳಿಯು ಕಟ್ಟುವ ಮನೆಗಳ ಬಗ್ಗೆ

೭೭(೩೫೧೧) ಶ್ರೀ ಪಂಪಾಪತಿ, (ದಾವಣಗೆರೆ).—ಮಾನ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ದಾವಣಗೆರೆ ನಗರವು ಕೈಗಾರಿಕೆ, ವಾಣಿಜ್ಯ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಮುಂದು ವರಿಯುತ್ತಿದ್ದು, ಸುಮಾರು ೩ ಲಕ್ಷ ಜನಸಂಖ್ಯೆಯನ್ನು ಮೀರುತ್ತಿದ್ದು ಅಲ್ಲಿರುವ ಅಧಿಕಾರಿಗಳಿಗೆ ಮತ್ತು ಜನಸಾಮಾನ್ಯರಿಗೆ ಅನುಕೂಲವಾಗುವಂತೆ ವಸತಿ ನಿರ್ಮಾಣ ಮಾಡುವ ವಿಷಯ ಸರ್ಕಾರದವರ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಸದರಿ ವರ್ಷಗಳಿಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗುವುದು ಮತ್ತು ಯಾವಾಗ ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ದಾವಣಗೆರೆ ನಗರದಲ್ಲಿ ಹೆಚ್ಚುತ್ತಿರುವ ಜನ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಆ ನಗರವಲ್ಲಿ ಅಧಿಕಾರಿಗಳಿಗೆ ಮತ್ತು ಜನಸಾಮಾನ್ಯರಿಗೆ ವಸತಿ ಸೌಲಭ್ಯ ಮಾಡಿಕೊಡುವ ಉದ್ದೇಶ ಸರ್ಕಾರದ ಗಮನದಲ್ಲಿದ್ದು, ಗೃಹಮಂಡಲಿಯು ಈ ದಿಶೆಯಲ್ಲಿ ದಾವಣಗೆರೆ ತಾಲ್ಲೂಕಿನ ಅಪರಗೆರೆ ಹಳ್ಳಿ ಕಸಬಾದಲ್ಲಿ ೧೬ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿ ಕೊಳ್ಳಲು ಅಧಿಸೂಚನೆ ಳ(೧)ರ ಪ್ರಕಾರ ಪ್ರಾಥಮಿಕ ಹಂತದ ಕಾರ್ಯವನ್ನು ಮುಂದು ವರಿಸುತ್ತಿದೆ.

ಆ) ಜಮೀನು ಸ್ವಾಧೀನಕ್ಕೆ ಬಂದ ಮೇಲೆ ಸೂಕ್ತಗೃಹ ನಿರ್ಮಾಣ ಯೋಜನೆ ರೂಪಿಸ ಲಾಗುವುದು.

ಇ) 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ರಾಜ್ಯದ ಚಲನ ಚಿತ್ರ ಉದ್ಯಮಕ್ಕೆ ಸಹಾಯಕವಾಗಬಲ್ಲ ಕಾರ್ಯಕ್ರಮಗಳ ಬಗ್ಗೆ

೭೮(೧೨೪) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಹೊರಗಡೆ ಚಿತ್ರೀಕರಣಗೊಂಡ ಕನ್ನಡ ಚಲನಚಿತ್ರಗಳಿಗೆ ಸಹಾಯಧನವನ್ನು ನಿಲ್ಲಿಸುವುದರಿಂದ ರಾಜ್ಯದಲ್ಲಿಯ ಚಲನಚಿತ್ರ ಉದ್ಯಮಕ್ಕೆ ಸಹಾಯಕವಾಗ ಬಲ್ಲದು ಎನ್ನುವುದು ಸರ್ಕಾರದವರ ನಿಲುವೇನು ?

ಆ) ರಾಜ್ಯದಲ್ಲಿ ಚಲನಚಿತ್ರೋದ್ಯಮ ಬೆಳೆಯಲು ಸರ್ಕಾರವು ಕೈಗೊಂಡ ಪ್ರೋತ್ಸಾಹದ ಹಾಗೂ ಸಹಾಯಕ ಕಾರ್ಯಕ್ರಮಗಳೇನು ?

ಇ) ಈ ನಿಟ್ಟಿನಲ್ಲಿ ಸರ್ಕಾರದ ಬಂಡವಾಳ ತೊಡಗಿಸಿದ ಚಲನಚಿತ್ರ ಸ್ಟುಡಿಯೋಗಳ ಸುಧಾರಣೆಯೂ ಒಂದಾಗಿದೆಯೇ ಸ್ಟುಡಿಯೋದ ಹೆಸರುಗಳೇನು ಹಾಗೂ ಸುಧಾರಣೆಯ ಕ್ರಮಗಳೇನು ?